ಇಟ್ಟುಕೊಂಡಿದ್ದರೆ ಅವನಿಗೆ ಒಂದು ವರ್ಷ ಪೂರ್ತಿ ದನಗಳಿಗೋಸ್ಕರ ಕಾಯ್ದಿರಿಸಬೇಕು. ನಷ್ಟಕ್ಕೊಳಗಾದವರಿಗೆ ತಹಶೀಲ್ದಾರ್ 500 ರೂ.ಗಳನ್ನು ಮತ್ತು ಎ.ಸಿ.ಯವರು 500 ರೂ.ಗಳನ್ನು ಕೊಡುತ್ತಾರೆ. ಸರಕಾರದವರು ಒಂದು ಎಕರೆಗೆ ಇಷ್ಟು ಹಣ ಎಂದು ಪರಿಹಾರವನ್ನು ಫಿಕ್ಸ್ ಮಾಡಿದರೆ ಅನುಕೂಲವಾಗುತ್ತದೆ. ನೆಲ್ಲುಹುಲ್ಲು, ರಾಗಿಕಡ್ಡಿ, ಜೋಳದಕಡ್ಡಿ ಯಾವುದೇ ಇದ್ದರೂ ಅದಕ್ಕೆ ಪರಿಹಾರವನ್ನು ಕೊಡುವ ಬಗ್ಗೆ ಸರಕಾರದವರು ಗಂಭೀರವಾಗಿ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ನಿಯಮಾವಳಿಗಳ ಪ್ರಕಾರ ನಷ್ಟರಾಗಿದ್ದರೆ ಇಷ್ಟು ಕೊಡಬೇಕೆಂದು ಈಗಿನ ನಿಯಮಗಳಲ್ಲಿದೆ. ತಹಶೀಲ್ದಾರ್ ಇಷ್ಟು, ಜಿಲ್ಲಾಧಿಕಾರಿಗಳು ಇಷ್ಟು ಕೊಡಬಹುದೆಂದು ಇದೆ. ಇವರಿಬ್ಬರನ್ನು ಮೀರಿ ಸರಕಾರಕ್ಕೆ ಹೆಚ್ಚು ಪರಿಹಾರವನ್ನು ಕೊಡತಕ್ಕಂಥ ಅಧಿಕಾರ ಇದೆ. ಇದನ್ನು ಪುನರ್‌ಪರಿಶೀಲನೆ ಮಾಡಬೇಕೆಂಬ ಬಗ್ಗೆ ಮಾನ್ಯ ಸದಸ್ಯರು ಸಲಹೆ ಮಾಡುತ್ತಿದ್ದಾರೆ. ಇದನ್ನು ಸರಕಾರವು ಪರಿಶೀಲಿಸುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(viii) ಬ್ರಹ್ಮಾವರದ ರಾಜಾರಾಮ ಶೇರ್ವೇಗಾರ್‌ರವರ ಕೊಲೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೇ, ಒಂದೂಕಾಲು ವರ್ಷದ ಹಿಂದೆ ನಡುಹಗಲಲ್ಲಿ ಬ್ರಹ್ಮಾವರದ ರಾಜಾರಾಮ ಶೇರ್ವೇಗಾರ್ ಎಂಬ ಪರಿಸರವಾದಿ ಹಾಗೂ ಸಮಾಜಸೇವರ ಬರ್ಬರಹತ್ಯೆ ನಡೆಯಿತು. ಆದಾದನಂತರ ತನಿಖೆಯಾ ನಡೆಯುತ್ತಿರಲಿಲ್ಲ. ಅದಕ್ಕೋಸ್ಕರ ಸಾರ್ವಜನಿಕರ ಒತ್ತಡವನ್ನು ರೂಪಿಸುವುದಕ್ಕೋಸ್ಕರವಾಗಿ ಆಗಿನ ವಿರೋಧಪಕ್ಷದ ಮುಖಂಡರಾಗಿದ್ದ ಮಾನ್ಯ ಶ್ರೀ ಯಡಿಯೂರಪ್ಪನವರ ನೇತೃತ್ವದಲ್ಲಿ ಪ್ರತಿಭಟನೆಯು ಮಂಗಳೂರಿನಲ್ಲಿ ಆಯಿತು. ಅದರ ನಂತರ ಸಿಓಡಿ ತನಿಖೆಯನ್ನು ನಡೆಸಲಾಯಿತು ಸಿಓಡಿ ತನಿಖೆಯನ್ನು ನಡೆಸಿ ಒಂದು ವರ್ಷವಾದ ನಂತರ ಅಪರಾಧಿಗಳು ಯಾರು ಎಂದು ಗುರುತಿಸಲ್ಪಟ್ಟಿದ್ದಾರೆ ಹಾಗೂ ಆ ಸಂದರ್ಭದಲ್ಲಿ ಮತ್ತು ಸಮಕ್ಷಮದಲ್ಲಿದ್ದ ರಫಿಕ್‌ಮೂಲ್ಲಾ ಎಂಬ ಸರ್ಕಲ್ ಇನ್ಸ್‌ಪೆಕ್ಟರ್ ಅವರ ಅಂಟಿಸಿಪೇಟರಿ ಬೇಲ್‌ಗೆ ಪ್ರಯತ್ನಪಟ್ಟು ಅದು ಸಿಗದೇ ಇರುವಂಥ ಸಂದರ್ಭದಲ್ಲಿ ಕೂಡ ಚಾರ್ಜ್‌ಶೀಟ್‌ನ್ನು ಹಾಕಿಲ್ಲ. ಹೀಗೆ ಚಾರ್ಜ್‌ಶೀಟ್‌ನ್ನು ಹಾಕಿಲ್ಲವೆಂದು ಹೇಳಿ ಜಿಲ್ಲೆಯ ಎಲ್ಲಾ ಶಾಸಕರು, ಜಿಲ್ಲಾ ಪಂಚಾಯತ್‌ನ ಸದಸ್ಯರು ಸನ್ಮಾನ್ಯ ಮುಖ್ಯಮಂತ್ರಿಯವರ ಮನೆಯ ಎದುರಿನಲ್ಲಿ ಧರಣಿ ಮಾಡಿದಾಗ ಸಂಬಂಧಪಟ್ಟ ಆರೋಪಿಯಮೇಲೆ ಒಂದು ವಾರದದೊಳಗಾಗಿ ಚಾರ್ಜ್‌ಶೀಟ್‌ನ್ನು ಹಾಕುತ್ತೇವೆ ಎಂಬ ಆಶ್ವಾಸನೆಯನ್ನು ಕೊಟ್ಟರು. ಹಾಗೆ ಆಶ್ವಾಸನೆಯನ್ನು ಕೊಟ್ಟು ಎರಡು ತಿಂಗಳುಗಳಾಗಿವೆ. ಆದರೂ ಕೂಡ ಯಾವುದೇ

ರೀತಿಯಲ್ಲಿ ಚಾರ್ಜ್‌ಶೀಟ್‌ನ್ನು ಹಾಕಿಲ್ಲ. ಹೀಗೆ ಇಷ್ಟು ಜನ ಶಾಸಕರುಗಳಿಗೆ ಕೊಟ್ಟ ಆಶ್ವಾಸನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮುರಿದಿದ್ದಾರೆ. ಇದರಿಂದ ನಮಗೆಲ್ಲಾ ನೋವುಂಟಾಗಿದ್ದು ಜನರಲ್ಲಿ ಕೂಡ ನೋವು ಮತ್ತು ಆಕ್ರೋಶದ ವಾತಾವರಣವು ಉಂಟಾಗಿದೆ. ಮಾನ್ಯ ಅಧ್ಯಕ್ಷರ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ ಈ ಚಾರ್ಜ್‌ಶೀಟ್‌ನ್ನು ತತ್‌ಕ್ಷಣ ದಾಖಲಿಸ ಬೇಕು ಮತ್ತು ಅದನ್ನು ಕೋರ್ಟ್‌ಗೆ ಸಬ್‌ಮಿಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಅಪರಾಧಿಗಳು ಎಲ್ಲಿ ಇದ್ದರೂ ಅವರನ್ನು ಬಂಧಿಸಿ ಸೂಕ್ತ ಶಿಕ್ಷೆ ವಿಧಿಸಿ ಕಾನೂನು ಕ್ರಮವನ್ನು ಜರುಗಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) : ಮಾನ್ಯ ಸದಸ್ಯರು ಈ ಕುರಿತು ಮಾನ್ಯ ಮುಖ್ಯಮಂತ್ರಿಯವರು ಭರವಸೆ ಕೊಟ್ಟಿದ್ದಾರೆಂದು ಹೇಳಿದ್ದಾರೆ. ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಅವರು ಕೊಟ್ಟಿರತಕ್ಕಂಥ ಭರವಸೆಯಂತೆ ಕ್ರಮ ತೆಗೆದುಕೊಳ್ಳ ಬೇಕೆಂಬ ಬಗ್ಗೆ ಅವರಲ್ಲಿಯೂ ಸಹ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಭರವಸೆ ಕೊಟ್ಟು ಒಂದು ವಾರದಲ್ಲಿ ಚಾರ್ಜ್ ಶೀಟ್ ಹಾಕುತ್ತೇವೆ ಎಂದು ಹೇಳಿ ಎರಡು ತಿಂಗಳುಗಳಾದರೂ ಕೂಡ ಹಾಕಿಲ್ಲವಾದುದು ಅನ್ಯಾಯವಾಗಿದೆ. ಭರವಸೆಯು ಭರವಸೆಯಾಗಿ ಉಳಿದುಕೊಂಡಿದೆ. ಇದು ಒಂದು ರೀತಿಯಲ್ಲಿ ನಮ್ಮ ಎಲ್ಲಾ ಶಾಸಕರುಗಳಿಗೆ ಆಗಿರುವಂಥ ಅನ್ಯಾಯವೆಂದು ನಾನು ತಿಳಿದುಕೊಂಡಿದ್ದೇನೆ.

Mr. Speaker : You should understand the magnitude or the seriousness.

ಸನ್ಮಾನ್ಯ ಸದಸ್ಯರು ಹೇಳುವುದೇನೆಂದರೆ ಈಗಾಗಲೇ ತಡವಾಗಿದೆ, ಅದನ್ನು ತೀವ್ರಗತಿಯಿಂದ ನೋಡಬೇಕೆಂದು ಹೇಳಿದ್ದಾರೆ. ವಿಳಂಬಕ್ಕೆ ಅವಕಾಶ ಕೊಡಬೇಡಿ ಎಂದು ಕೇಳಿಕೊಂಡಿದ್ದಾರೆ.

ಶ್ರೀ ಸಿ. ಭೈರೇಗೌಡ : ಆಯಿತು.

ix) ಮೈಸೂರು ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಪಕ್ಷದ ಸದಸ್ಯರ ಮೇಲೆ ಹಲ್ಲೆ.

ಶ್ರೀ ಎ. ರಾಮದಾಸ್ (ಕೃಷ್ಣರಾಜ್) : ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು ಬೆಳಿಗ್ಗೆ 10 ಗಂಟೆಗೆ ಮೈಸೂರು ಮಹಾನಗರಪಾಲಿಕೆಯ ಆಯವ್ಯಯ ಮಂಡನೆ ಇತ್ತು. 1996-97ನೇ ಸಾಲಿನಲ್ಲಿ ಆರೋಗ್ಯ ಇಲಾಖೆಗೆ 9 ಕೋಟಿ ರೂ.ಗಳನ್ನು ನೀಡಲಾಗಿತ್ತು. ಪ್ರಸ್ತುತ ಸಾಲಿನಲ್ಲಿ